ಚಿತ್ರಪಟ ಕಥನ






‘ಮಾಲ್ಗುಡಿ ಡೇಸ್’ ಧಾರಾವಾಹಿಯ ಸವಿನೆನಪುಗಳನ್ನು ಜೀವಂತವಾಗಿಡುವ ಪ್ರಯತ್ನ ರಿಪ್ಪನ್‌ಪೇಟೆ ಸಮೀಪದ ಅರಸಾಳಿನ ರೈಲ್ವೆ ನಿಲ್ದಾಣದ ಪಕ್ಕದಲ್ಲಿ ಮ್ಯೂಸಿಯಂ ರೂಪದಲ್ಲಿ ರೂಪು ತಳೆದಿದೆ.

# ‘ಮಾಲ್ಗುಡಿ ಮ್ಯೂಸಿಯಂ’ನಲ್ಲಿ ‘ಮಾಲ್ಗುಡಿ ಡೇಸ್’

■ ಎಚ್.ಎಸ್. ನವೀನಕುಮಾರ್

ಆರ್.ಕೆ. ನಾರಾಯಣ್ ಎಂದಕೂಡಲೇ ಸಹೃದಯರ ನೆನಪಿಗೆ ಬರುವುದು ‘ಸ್ವಾಮಿ ಅಂಡ್ ಹಿಸ್ ಫ್ರೆಂಡ್ಸ್’ ಮತ್ತು ‘ಮ್ಯಾನ್ ಈಟರ್ ಆಫ್ ಮಾಲ್ಗುಡಿ’ ಕಥನಗಳು. ನಾರಾಯಣ್‌ರ ಕೃತಿಗಳನ್ನು ಆಧರಿಸಿ, ಕನ್ನಡದ ಜನಪ್ರಿಯ ನಿರ್ದೇಶಕ ಶಂಕರ್‌ನಾಗ್ ಅವರು ನಿರ್ಮಿಸಿ, ನಿರ್ದೇಶಿಸಿದ್ದ ದೃಶ್ಯಕಾವ್ಯ ‘ಮಾಲ್ಗುಡಿ ಡೇಸ್’ ಧಾರಾವಾಹಿಯ ಜನಪ್ರಿಯತೆಯೂ ಬಹು ದೊಡ್ಡದು.

ದೂರದರ್ಶನದಲ್ಲಿ ಪ್ರಸಾರವಾದ ‘ಮಾಲ್ಗುಡಿ ಡೇಸ್’ 80ರ ದಶಕದ ಜನಪ್ರಿಯ ಧಾರಾವಾಹಿ. ಇತ್ತೀಚೆಗೆ ಅದರ ಕನ್ನಡ ಅವತರಣಿಕೆಯೂ ವಾಹಿನಿಯೊಂದರಲ್ಲಿ ಪ್ರಸಾರಗೊಂಡಿದೆ. ಆ ಧಾರಾವಾಹಿಯಲ್ಲಿ ಸ್ವಾಮಿಯ ಪಾತ್ರದಲ್ಲಿ ನಟಿಸಿದ್ದವರು ಅಂದಿನ ಖ್ಯಾತ ಬಾಲನಟ ಮಾಸ್ಟರ್ ಮಂಜುನಾಥ್. ಅನಂತನಾಗ್, ವಿಷ್ಣುವರ್ಧನ್, ಗಿರೀಶ ಕಾರ್ನಾಡ್, ರಮೇಶ್ ಭಟ್, ಜಯಶ್ರೀ ಅವರಂಥ ಘಟಾನುಘಟಿಗಳು ‘ಮಾಲ್ಗುಡಿ ಡೇಸ್’ನ ಭಾಗವಾಗಿದ್ದರು.

‘ಮಾಲ್ಗುಡಿ ಡೇಸ್’ ಧಾರಾವಾಹಿಯ ಸಂಪೂರ್ಣ ಚಿತ್ರೀಕರಣ ನಡೆದಿದ್ದು ಕರ್ನಾಟಕದ ಚಿರಾಪುಂಜಿ ಎಂದೇ ಪ್ರಸಿದ್ಧಿ ಪಡೆದಿರುವ

